Reg No B G 155

28-2-1969

52 nd Year of Publication

SATYAVADI Daily, MYSORE 4

ಸತ್ಯವಾದಿ

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ
ಸ್ಥಳದಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಅಂಚೆವೆಚ್ಚ ಸೇರಿ ವರ್ಷಕ್ಕೆ ರೂ 16-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ.

ಸ್ಥಾಪಕರು : ಅನುಮನಿ ಸರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಮತ ಗೋಹತ ನಿರೋಧ ಚಳವಳ !

"ಸತ್ಯವಾದಿ" ಯ ಸ್ವರ್ಣೋತ್ಸವ

"ಸತ್ಯವಾದಿ" ಯ ಸ್ವರ್ಣೋತ್ಸವವನ್ನು ಬೇಗನೇ ನೆರವೇರಿಸಲಾಗುವುದು.

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು, ಶ್ರೀಮನ್ಮಹಾರಾಜರು, ಮತ್ತಿತರ ಗಣ್ಯರು ಅಭಿನಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ನೆರವು ಅನುಗ್ರಹಿಸಿರುವರು.

ರಾಜಸಭಾಭೂಷಣ ಶ್ರೀ ಎಸ್. ಕೆ ಇರಾನಿಯವರು, ಶ್ರೀ ಮಾಧವ್ ಶೆನ್ವೈ ರವರು, ಶ್ರೀ ಎಂ. ಬಿ. ಬಸವಯ್ಯನವರು. ಆಪೆರಾ ಟಾಕೀಸಿನವರು, ಪದ್ಮಭೂಷಣ ನೇತ್ರದಾನಿ ಡಾ॥ ಎಂ.ಸಿ.ಮೋದಿಯವರು ಡಾ ॥ ಆರ್. ಎಸ್. ನಂಜುಂಡಸ್ವಾಮಿ (ಗ್ಲಾಸ್ಕೊ) ಶಾಸ್ತ್ರಧರ್ಮಪರಿತ ಶ್ರೀ ಅನಂತ ನರಸಿಂಹಯ್ಯಂಗಾರ್ (ಹೆಂಗನೂರು) ರವರೂ ಶುಭಾಶಯವೊಡನೆ ನೆರವು ನೀಡಿರುವರು.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳವಾಗಿದ್ದು ಮೈಸೂರು ರಾಜ್ಯದಲ್ಲಿ ನಡೆದಂತೆಯೇ ಇಲ್ಲ.

ಸ್ವರ್ಣೋತ್ಸವದ ಪೂರ್ಣ ಯಶಸ್ಸಿಗೆ ಶುಭ ಸಂದೇಶಗಳನ್ನೂ, ಧನನೆರವನ್ನೂ ಆದಷ್ಟು ವಿಜ್ಞಾಪನೆಗಳಿಂದ ನೀಡಿ ಸಹಕರಿಸಬೇಕಾಗಿ ವಿನಂತಿಸಿ, ಈ ತೇರುವನ್ನೆಂದು, ಆಶಿಸಿ, ಕೃತಜ್ಞತಾಪೂರ್ವಕವಂದಿಸುತ್ತೇನೆ

ಸಂಪಾದಕ 'ಸತ್ಯವಾದಿ'
ಚಾಮರಾಜಪುರಂ, ಮೈಸೂರು 4.

ಪೌರಸಭೆ

ಮೈಸೂರು— ನಿನ್ನೆ ಪೌರಸಭಾಧ್ಯಕ್ಷ ಶ್ರೀ ತಿಮ್ಮಯ್ಯನವರ ಅಧ್ಯಕ್ಷತೆಯಲ್ಲಿ ನಡೆದ ಅಧಿವೇಶನದಲ್ಲಿ, ಬೊಂಬಾಯಿನಲ್ಲಿ ಶಿವಸೇನಾ ಹಾವಳಿಯನ್ನು ಖಂಡಿಸಿ, ಅದನ್ನು ಪ್ರತಿಬಂಧಿಸಬೇಕೆಂದು ನಿರ್ಣಯಿಸಲಾಯಿತು.

ಹಿಂದಿ ವಿಶ್ವವಿದ್ಯಾಲಯ

ನವದೆಹಲಿ— ದಕ್ಷಿಣದಲ್ಲಿ ಕೇಂದ್ರ ಹಿಂದಿ ವಿಶ್ವವಿದ್ಯಾಲಯ ಸ್ಥಾಪಿಸಬೇಕೆಂದಿದ ಯೋಚನೆಯನ್ನು ತ್ಯಜಿಸಲಾಗಿದೆಯೆಂದು ರಾಜ್ಯಸಭೆಯಲ್ಲಿ ತಿಳಿಸಲಾಯಿತು.

★

ಅನಾವೃಷ್ಟಿ ಪರಿಹಾರ

ನವದೆಹಲಿ— ದೇಶದಲ್ಲಿ ಅನಾವೃಷ್ಟಿ ಪೀಡಿತ ಜನರ ಪರಿಹಾರ ಕಾರ್ಯಗಳಿಗೆ 16.5 ಲಕ್ಷ ಜನರು ಕೆಲಸಮಾಡುತ್ತಿರುವರೆಂದೂ, 7 ರಾಜ್ಯಗಳ 95 ಜಿಲ್ಲೆಗಳು ಅನಾವೃಷ್ಟಿಪೀಡಿತವಾಗಿವೆಯೆಂದೂ ಪಾರ್ಲಿಮೆಂಟಿನಲ್ಲಿ ತಿಳಿಸಲಾಯಿತು.

●

ನವದೆಹಲಿ— ಗಿರಾಕಿಗಳನ್ನು ಆಕರ್ಷಿಸಲು ಸರಕಾರವು ಪ್ರಾಲೀಕತ್ವದ ಒಂದು ಹೋಟಲಿನಲ್ಲಿ ಸಂಗೀತ ನಡೆಸಲು ಬ್ಯಾಂಡ್ ನುತ್ತು ಕ್ಯಾನರ್ ಏರ್ಪಡಿಸಲಾಗಿದೆ ಎಂದು ರಾಜ್ಯಸಭೆಯಲ್ಲಿ ತಿಳಿಸಲಾಯಿತು.

ಮಹಾತ್ಮಾ ಗಾಂಧಿ ಸೇವಾ ಸಂಘ

ಮೈಸೂರು— ಮೇಲ್ಕಂಡ ಸಂಘವು ಆಶ್ರಯದಲ್ಲಿ ಮಾರ್ಚಿ 3 ಸೋಮವಾರ ಸಾಯಂಕಾಲ 4-15 ಘಂಟೆಗೆ ಪುರಭವನದಲ್ಲಿ ಗಾಂಧೀಜೀಯವರ ಇಪ್ಪತ್ತೆರಡನೆಯ ಶಾಂತಿ ಮಹೋತ್ಸವವು ಏರ್ಪಡಿಸಲಾಗಿದೆ — ಮೈಸೂರು ರಾಜ್ಯಪಾಲರಾದ ಶ್ರೀ ಜಿ ಎಸ್ ಪಾಠಕ್‌ರವರು ಉದ್ಘಾಟಿಸುವರು.

ತೆಲಂಗಾಣಾ ಬಂದ್

ಹೈದರಾಬಾದು— ಪ್ರತ್ಯೇಕ ತೆಲಂಗಾಣಾ ರಾಜ್ಯ ಪಡೆಯಬೇಕೆಂಬ ತಮ್ಮ ನಿರ್ಧಾರ ವ್ಯಕ್ತಪಡಿಸಲು ಮಾರ್ಚಿ 3 ರಂದು "ತೆಲಂಗಾಣಾ ಬಂದ್" ಕರೆಯಲಾಗಿದೆ.

ಮಂತ್ರಿಗಳ ಸಂಬಳ

ಕಲ್ಕತ್ತಾ— ಸಂಯುಕ್ತ ರಂಗದ ಮಂತ್ರಿಗಳು ತಿಂಗಳಿಗೆ ರೂ. 500 ರಂತೆಯೂ ಮುಖ್ಯ ಮಂತ್ರಿಯವರು ರೂ. 750 ಸಂಬಳ ಪಡೆಯುವರೆಂದು ವರದಿಯಾಗಿದೆ.

ಗೋಹತ್ಯ ನಿರೋಧ ಚಳವಳ

ನವದೆಹಲಿ— ಸರಕಾರವು ಗೋಹತ್ಯವನ್ನು ಪ್ರತಿಬಂಧಿಸದಿದ್ದರೆ, ಗೋರಕ್ಷಸಮಿತಿಯು ಹೊಸ ಚಳವಳ ಹೂಡುವುದೆಂದು ಸಮಿತಿ ಅಧ್ಯಕ್ಷರಾದ ಶ್ರೀ ಪೂರಿಜಗದ್ಗುರುಗಳು ಹೇಳಿದರು.

●

ನ್ಯಾಯಾಂಗ ಆಡಳಿತ ಸುಧಾರಣೆ

ಕಲ್ಕತ್ತಾ— ಪಶ್ಚಿಮ ಬಂಗಾಳಾದಲ್ಲಿ ನ್ಯಾಯಾಂಗ ಆಡಳಿತದಲ್ಲಿ ನ್ಯಾಯಾಸ್ಥಾನಗಳಿಂದ ಗ್ರಾಮ ಪಂಚಾಯಿತಿಯವರೆಗೆ ನವೀನ ಪದ್ಧತಿಯನ್ನು ನ್ಯಾಯಾಂಗ ಮಂತ್ರಿ ಶ್ರೀ ಮಂಡಾಲರು ಜಾರಿಗೆ ತರಲಿರುವರು — ಕೂಡಲೇ ಕಲ್ಕತ್ತಾ ಹೈಕೋರ್ಟಿನಲ್ಲಿ "ಒರಿಜಿನಲ್ ಸೈಡ್" ವಜ್ಜಾಮಾಡಲಾಗುವುದು ಮತ್ತು ಬ್ಯಾರಿಸ್ಟರ್ಸು ಮತ್ತು ಅಡ್ವೊಕೇಟರುಗಳಲ್ಲಿನ ಭೇದ ತೆಗೆದುಹಾಕಲಾಗುವುದೂ ಹೇಳಲಾಗಿದೆ.

○

ಈಗಲೆ ರಾಜೀನಾಮೆ ಕೊಡಿ

ರಾವಲ್ಪಿಂಡಿ— ಅಧ್ಯಕ್ಷ ಅಯೂಬರು ಕೂಡಲೇ ರಾಜೀನಾಮೆ ಕೊಡುವಂತೆ ವಿರೋಧ ನಾಯಕ ಭುಟ್ಟೋ ಕೆಳಿಕೆ ಹಾಕಿರುವರು.

★

ಶ್ರೀ ವೀರೇಂದ್ರ ಪಾಟೀಲರು

ಬೆಂಗಳೂರು— 9 ತಿಂಗಳಿಂದ ಮುಖ್ಯಮಂತ್ರಿಗಳಾಗಿರುವ ಶ್ರೀ ವೀರೇಂದ್ರ ಪಾಟೀಲರಿಗೆ 46 ವರ್ಷಗಳು ತುಂಬಿತು.

○

ಸ್ವತ್ಯ ಸಲಹೆ

ಬೆಂಗಳೂರು— ವೈಶ್ಯ ಬ್ಯಾಂಕು ಶಾಖೆಯನ್ನು ಉದ್ಘಾಟಿಸುತ್ತಾ, ಮುಖ್ಯ ಮಂತ್ರಿ ಶ್ರೀ ವೀರೇಂದ್ರ ಪಾಟೀಲರು, ಉಳಿತಾಯ ಪದ್ಧತಿ ಉತ್ತೇಜನಕ್ಕೆ ಬ್ಯಾಂಕುಗಳು ಅನೇಕ ಅನಾವಶ್ಯಕ ನಿರ್ಬಂಧಗಳನ್ನು ತೆಗೆದುಹಾಕಬೇಕೆಂದು ಸೂಚಿಸಿದರು.

ಮೈಸೂರು ಉಪಕರಣಗಳ ಕಾರ್ಖಾನೆ

ಹಾಸ್ಯನ್ನ

(ಮೈಸೂರು ಸರಕಾರದ ಉದ್ದಿಮೆ)

ಜೆನ್ನಾಗಿ ಕಾವು ಕೊಟ್ಟು ಟಿಂಪರುಗೊಳಿಸಿದ
ಶ್ರೇಷ್ಠ ಕಾರ್ಬನ್ ಉಕ್ಕಿನಿಂದ ತಯಾರಿಸಿದ
ಶ್ರೇಷ್ಠ ದರ್ಜೆಯ ಉಪಕರಣಗಳು.

ಸಾಮಾನುಗಳನ್ನು ತೆಗೆದುಕೊಳ್ಳುವ ಮೊದಲೇ ಒರಗೆ ಹಚ್ಚಬಹುದು

ಈ ಉಪಕರಣಗಳು ಅತ್ಯಂತ ಗಟ್ಟಿಯಾಗಿವೆ
ದೀರ್ಘಕಾಲ ಬಾಳಿಕೆ ಬರುತ್ತವೆ
ಇದರಲ್ಲಿ ಹಣ ತೊಡಗಿಸುವುದು ಒಂದು ಸುಧೈನ

ಕಾರಖಾನೆ ಅಥವಾ ಜೋನಲ್ ಏಜೆಂಟರೊಡನೆ ಪತ್ರವ್ಯವಹಾರ ಮಾಡಬಹುದು

ಪಾಪದ ಪರಿಣಾಮ

ಹೆಜರತ್ ಇಬ್ರಾಹಿಂರವರು ಬಹು ಸಿಷ್ಟಾನಂತ ಮುಸ್ಲಿಂರಾಗಿದ್ದರು. ಒಂದು ಕಾಲದಲ್ಲಿ ದೇವರಿಗೆ ಪ್ರಾರ್ಥನೆ ಮಾಡುತ್ತಿದ್ದಾಗ, ತಮಗೆ ಸದಾಕಾಲದಲ್ಲೂ ಪ್ರತಿಯಾಗಿ ದೊರೆಯುತ್ತಿದ್ದ ಮನಸ್ಸಿನಲ್ಲಿಯ ಆನಂದ ಕಾಣಬರಲಿಲ್ಲ. ಇದಕ್ಕೆ ಕಾರಣ ಕಾರಣ ಅರಿಯಲು ಒಬ್ಬ ಹಿರಿಯ ಮುಸ್ಲಿಂ ಭಕ್ತನಲ್ಲಿಗೆ ಹೋದಾಗ, ಆತನು "ಫಲಾನಿ ಇಂಥಾ ದಿವಸ ಬಾಸ್ರಾದಲ್ಲಿ ಒಬ್ಬ ವ್ಯಾಪಾರಿಯಿಂದ ನೀನು ಐರ್ಜೂರ ಕೊಂಡುಕೊಂಡಾಗ, ಕೆಳಗೆ ಬಿದ್ದಿದ್ದ ಒಂದು ಖರ್ಜೂರವನ್ನು ನಿನ್ನದೆಂದು ಭಾವಿಸಿ ಎತ್ತಿಕೊಂಡೆ ; ಆ ದಿನದಿಂದ ನಿನ್ನ ಪ್ರಾರ್ಥನೆಗೆ ಪ್ರತಿಕ್ರಿಯೆ ಕಂಡುಬರುತ್ತಿಲ್ಲ" ಎಂದು ಹೇಳಿದನು.

ಹೆಜರತ್ ಇಬ್ರಾಹಿಂರವರು ಆ ಘಟನೆಯನ್ನು ಜ್ಞಾಪಿಸಿಕೊಂಡು, ಕೂಡಲೇ ಬಾಸ್ರಾಕ್ಕೆ ಹೋಗಿ, ಅಂಗಡಿಯವನಿಗೆ ಸೇರಿದ್ದ ಒಂದು ಖರ್ಜೂರವನ್ನು ಅವನ ಅಪ್ಪಣೆ ಇಲ್ಲದೆ ತೆಗೆದುಕೊಂಡದ್ದಕ್ಕೆ ಕ್ಷಮಾಪಣೆ ಅರ್ಪಿಸಿದರು. ಅಂದಿನಿಂದ ಅವರನ್ನು ಸುತ್ತುವರಿದಿದ್ದ ಕತ್ತಲೆ ಸೀಳಿ ಬೆಳಕು ಮೂಡಿಬಂದು, ಅವರು ಹಿಂದಿನಂತೆ ಪ್ರಾರ್ಥನೆ ಮಾಡಲು ಸಾಧ್ಯವಾಯಿತು.

● ಪ್ರಪಂಚದಲ್ಲಿ ಅನೇಕ ಆಶ್ಚರ್ಯಕರ ಸನ್ನಿವೇಶನಗಳೂ ವಸ್ತುಗಳೂ ಇರುವಂತೆ, ಫೆಡರಲ್ ರಿಪಬ್ಲಿಕ್ ಜರ್ಮನಿಯಲ್ಲಿನ 'ಕೃತ್ರಿಮ ವಿದ್ಯುತ್ ಶಕ್ತಿಯುತ ಬಿಲುಮೆ" ಯನ್ನು ಅನೇಕ ರೋಗಗಳನ್ನು ನಿವಾರಿಸಿ, ಹೆಂಗಸಿನ ಬಂಜೆತನವನ್ನೂ ನೀಗಿಸಿ ವೈದ್ಯರಿಗೆ ಆಶ್ಚರ್ಯವನ್ನುಂಟುಮಾಡಿದೆ.

Golden Jubilee of 'Satyavadi'

The golden jubilee of the 'Satyavadi' is to be celebrated very soon

The President, the Prime Minister H H. the Maharaja of Mysore and other personages have extended messages of felicitations and good wishes. Sri Sringeri and Sri Dwaraka Jagadgurujis have favoured blessings and financial aid.

Rajasabha-bhushana Sri F. K. Irani, Sri M. B. Basaviah. Sri Madhav Shenoi Sri Opera Talkies. Padmabhushana Dr. M.C. Modi, Dr. R. S. Nanjundaswamy (Glasgow) Sri Ananthanarasimhaiyengar (Honganur) have generously extended donations and best wishes

It iswelknown that golden jubilee of newspapers in India is rare and almost unknown in Mysore State. The Prime Minister has expressed that it is no small achievement.

Hearty cooperation, extending of messages and donations and gracing the occasion with presence, are fervently solicited with grateful thanks.

Editor, 'Satyavadi' Chamarajapuram, Mysore: 4.



Protect the Cow

ವುಡ್‌ಲ್ಯಾಂಡ್ಸ್ 28-2-69 ರಿಂದ

ಆಮೋಹ ಆರಂಭ

— ಚಿತ್ತಾಕರ್ಷಕ ಸಾಂಸಾರಿಕ ಹಿಂದಿ ಚಿತ್ರ —

ಘರ್ ಕಾ ಚಿರಾಗ್

ಪಾತ್ರ— ಧರ್ಮೇಂದ್ರ್, ಬಿಶ್ವಜಿತ್, ಮಹಿದಾ ರಹಿಮಾನ್, ಬಾಲರಾಜ್ ಸಹಾನಿ, ದೇವ್ ಕುಮಾರ್

ನಿರ್ದೇಶನ : ಜಗದೇವ್ — ಸಂಗೀತ : ಮದನ್ ಮೋಹನ್

[ದಿನ 3 ಪ್ರದರ್ಶನಗಳು]

ಅಪೆರಾ— 28-2-69 ರಿಂದ

— ಅತ್ಯಮೋಘ ಹಿಂದಿ ಚಿತ್ರ —

ಪರಿವಾರ್

ಮನರಂಜನ ತೆರಿಗೆ ಮನ್ನಾ ಮಾಡಿದೆ ವರ್ಣರಂಜಿತ

ಪಾತ್ರ : ಜಿತೇಂದ್ರ ನಂದ, ರಾಜೇಂದ್ರನಾಥ್, ಓಂ ಪ್ರಕಾಶ್

.... ದಿನವಹಿ 3 ಆಟಗಳು ....

Quality Printing — Neat Binding

Lakshminarasimha Press

Sivarampet, Mysore

SHAKTI

SUDHA

A Superb Tonic

Help The Gorakshana

ಆಶೋಕ ಟಿಜೆನ್ಸಿನ್

ಅಂಬಾಸ್ಡರ್ ಬಿಲ್ಡಿಂಗ್ಸ್, ಮೈಸೂರು

ಎಲ್ಲ ವಿಧ ಭಯಾನಕ್ಕಾದ ಔಷಧಗಳೂಷಧಿಗಳಲ್ಲಿ ದೊರೆಯುವ ಕ್ಷಯ

Edited, Printed & Published by Dharmaprachara Nirata M S Krishna Rao (Proprietor) at the Satyavad Press Chamarajapuram, Mysoe 4